NOVEMBER 11, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಹೊಸ ದಿಲ್ಲಿಯ, ಕೆಂಪುಕೋಟೆ ಬಳಿ, ಕಾರ್ ಸ್ಫೋಟ; 8 ಜನರ ಸಾವು, 25ಕ್ಕೂ ಹೆಚ್ಚು ಜನರಿಗೆ ಗಾಯ.
- ರಾಷ್ಟ್ರ ರಾಜಧಾನಿಯಲ್ಲಿ ಕಾರ ಸ್ಫೋಟದ ಹಿನ್ನೆಲೆ, ರಾಜ್ಯಾದ್ಯಂತ ಕಟ್ಟೆಚ್ಚರ; ಬಿಗಿ ಪೊಲೀಸ್ ಬಂದೋಬಸ್ತ್.
- ಇಂದು ರಾಷ್ಟ್ರೀಯ ಶಿಕ್ಷಣ ದಿನ: ಮೌಲಾನಾ ಅಬುಲ್ ಕಲಾಂ ಅಜಾದ್, ಕೊಡುಗೆ ಸ್ಮರಣೆ.
- ವೀರ ವನಿತೆ, ಒನಕೆ ಓಬವ್ವ ಅವರ ಜಯಂತ್ಯುತ್ಸವ, ಇಂದು ನಾಡಿನಾದ್ಯಂತ ಆಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಹೊಸದಿಲ್ಲಿಯ ಕೆಂಪುಕೋಟೆ ಬಳಿ ಸಂಭವಿಸಿದ ಕಾರ್ ಸ್ಫೋಟದ ದುರ್ಘಟನೆಯಲ್ಲಿ, ಒಟ್ಟು 8 ಜನ ಮೃತಪಟ್ಟು, 25ಕ್ಕೂ ಹೆಚ್ಚು ಜನ ಗಾಯಗೊಂಡಿರುವುದಾಗಿ, ಕೇಂದ್ರ ಗೃಹ ಖಾತೆ ಸಚಿವ, ಅಮಿತ ಶಾಹ್ ತಿಳಿಸಿದ್ದಾರೆ. ನಿನ್ನೆ ಸಂಜೆ 7 ಗಂಟೆ ಹೊತ್ತಿಗೆ, ಹೊಸದಿಲ್ಲಿಯ ಕೆಂಪುಕೋಟೆ ಮೆಟ್ರೋ ಸ್ಟೇಶನ್ ಬಳಿ ಸಂಭವಿಸಿದ, ಕಾರ್ ಸ್ಫೋಟದ ಬಗ್ಗೆ, ಸಾಮಾಜಿಕ ಮಾಧ್ಯಮದಲ್ಲಿ ಪ್ರತಿಕ್ರಿಯೆ ನೀಡಿರುವ ಗೃಹ ಖಾತೆ ಸಚಿವರು, ನಿಧಾನವಾಗಿ ಚಲಿಸುತ್ತಿದ್ದ ಕಾರಿನಲ್ಲಿ, ಸ್ಫೋಟ ಸಂಭವಿಸಿದೆ. ಇ–ರಿಕ್ಷಾ ಮತ್ತು ಆಟೋ ರಿಕ್ಷಾಗಳು ಹಾನಿಗೀಡಾಗಿವೆ. 10 ಅಗ್ನಿ ಶಾಮಕ ದಳದ 10 ವಾಹನಗಳು, ಬೆಂಕಿ ನಂದಿಸುವಲ್ಲಿ ಹಾಗೂ ಪರಿಹಾರ ಕಾರ್ಯಾಚರಣೆಯಲ್ಲಿ ಸಮರೋಪಾದಿ ತೊಡಗಿದವು. ಗಾಯಗೊಂಡ ಹಲವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ, ಎಂದರು. ಸ್ಫೋಟದ ತನಿಖೆಯನ್ನು ರಾಷ್ಟ್ರೀಯ ಭದ್ರತಾ ಪಡೆ – ಎನ್.ಎಸ್.ಜಿ, ಅಪರಾಧ ತನಿಖೆ ವಿಭಾಗ ಹಾಗೂ ರಾಷ್ಟ್ರೀಯ ತನಿಖಾ ಸಂಸ್ಥೆಗೆ ವಹಿಸಲಾಗಿದೆ; ವಿಧಿವಿಜ್ಞಾನ ತಜ್ಞರ ತಂಡಗಳು ಸ್ಥಳದಲ್ಲಿ ಮಾಹಿತಿ ಕಲೆ ಹಾಕುತ್ತಿವೆ. ಅವಘಡದಲ್ಲಿ ಉಗ್ರರ ಕೈವಾಡವಿದೆಯೇ ಎಂಬುದು ಸೇರಿದಂತೆ, ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಲಾಗುವುದು ಎಂದು, ಗೃಹ ಖಾತೆ ಸಚಿವ ಅಮಿತ ಶಾಹ್ ತಿಳಿಸಿದ್ದಾರೆ.

<><><>

ಅಮಿತ ಶಾಹ್ ಧ್ವನಿ 44 ಸೆಕೆಂದುಗಳು

<><><>

ಹೊಸದಿಲ್ಲಿ ಕಾರು ಸ್ಫೋಟ ದುರ್ಘಟನೆಯಲ್ಲಿ ಅಸುನೀಗಿದ ಜನರ ಕುಟುಂಬ ವರ್ಗಕ್ಕೆ, ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ, ಎ.ಐ.ಸಿ.ಸಿ. ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ, ಅನೇಕ ಗಣ್ಯರು ಸಾಂತ್ವನ ತಿಳಿಸಿ, ಸಂತಾಪ ಸೂಚಿಸಿದ್ದಾರೆ. ಕಾರು ಸ್ಫೋಟ ದುರ್ಘಟನೆಯಲ್ಲಿ, 8 ಜನ ಸಾವಿಗೀಡಾಗಿದ್ದು, ಜನ ನಿಬಿಡ ಪ್ರದೇಶದಲ್ಲಿ ನಡೆದ ಅವಘಡದ ಕುರಿತು, ನಿಷ್ಪಕ್ಷಪಾತ ತನಿಖೆ ನಡೆಸಬೇಕು, ಘಟನೆಗೆ ಕಾರಣರಾದವರನ್ನು ಪತ್ತೆ ಹಚ್ಚಿ, ಕಠಿಣ ಶಿಕ್ಷೆಗೆ ಗುರಿ ಪಡಿಸಬೇಕು. ಈ ಕುಕೃತ್ಯದ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು, ಕಾಂಗ್ರೆಸ್ ಸೇರಿದಂತೆ, ವಿಪಕ್ಷಗಳು ಕೇಂದ್ರ ಸರ್ಕಾರವನ್ನು ಆಗ್ರಹಿಸಿವೆ. ನಿಷೇಧಿತ ಜೈಷ್–ಎ– ಮೊಹಮ್ಮದ್ – ಜೆ.ಇ.ಎಂ ಮತ್ತು ಅನ್ಸಾರ್ ಗಜ್ವತ್–ಉಲ್–ಹಿಂದ್ ಸಂಘಟನೆಗಳೊಂದಿಗೆ ನಂಟು ಹೊಂದಿದ್ದ, ಅಂತಾರಾಜ್ಯ ಮತ್ತು ಅಂತಾರಾಷ್ಟ್ರೀಯ ಉಗ್ರರ ಜಾಲವನ್ನು, ಪೊಲೀಸರು ಭೇದಿಸಿದ ಕೆಲವೇ ಗಂಟೆಗಳಲ್ಲಿ ಈ ಸ್ಫೋಟ ಸಂಭವಿಸಿದೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ಸ್ಫೋಟದ ಪ್ರಬಲತೆಗೆ ಸುತ್ತಲಿನ ಕಟ್ಟಡಗಳು ಕಂಪಿಸಿದವು. ಕೆಲ ಕಿಲೋ ಮೀಟರ್ ದೂರದ ಐಟಿಓ ವರೆಗೆ, ಸ್ಫೋಟದ ಸದ್ದು ಕೇಳಿ ಬಂದಿದೆ. ಘಟನೆಯ ಬೆನ್ನಲ್ಲೇ ದೇಶಾದ್ಯಂತ ಕಟ್ಟೆಚ್ಚರ ವಹಿಸಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಖಾತೆ ಸಚಿವ ಅಮಿತ ಶಾಹ್ ಅವರಿಂದ ಮಾಹಿತಿ ಪಡೆದಿದ್ದು, ಸೂಕ್ತ ನಿರ್ದೇಶನ ನೀಡಿದ್ದಾರೆ.

<><><>

ಹೊಸ ದಿಲ್ಲಿಯ ಕೆಂಪುಕೋಟೆ ಬಳಿ ಸಂಭವಿಸಿದ, ಭೀಕರ ಕಾರು ಸ್ಫೋಟದ ದುರ್ಘಟನೆ ಹಿನ್ನೆಲೆ, ರಾಜ್ಯದಲ್ಲೂ ಕಟ್ಟೆಚ್ಚರ ವಹಿಸಲು ನಿರ್ದೇಶನ ನೀಡಿ, ಬಿಗಿ ಭದ್ರತೆ ಕೈಗೊಳ್ಳಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಮೈಸೂರಿನಲ್ಲಿ, ಕರ್ನಾಟಕ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಬಳಿಕ ಮಾತನಾಡಿದರು. ಬೆಂಗಳೂರಿನ ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳು, ಜನನಿಬಿಡ ಪ್ರದೇಶಗಳಲ್ಲಿ, ಕಟ್ಟೆಚ್ಚರ ವಹಿಸುವಂತೆ, ಭದ್ರತೆಯನ್ನು ಬಿಗಿಗೊಳಿಸುವಂತೆ, ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಸೂಚಿಸಲಾಗಿದೆ ಎಂದರು. ಸ್ಫೋಟದಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸಿರುವ ಮುಖ್ಯಮಂತ್ರಿ, ಕುಟುಂಬದವರಿಗೆ ಸಾಂತ್ವನ ತಿಳಿಸಿ, ಗಾಯಾಳುಗಳ ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ.

<><><>

ಹೊಸ ದಿಲ್ಲಿಯ ಕೆಂಪು ಕೋಟೆ ಬಳಿ, ನಿನ್ನೆ ಸಂಜೆ ಸಂಭವಿಸಿದ ಕಾರ್ ಸ್ಫೋಟದ ಹಿನ್ನೆಲೆ, ವಿವಿಧ ದೇಶಗಳ ರಾಯಬಾರ ಕಚೇರಿಗಳು, ದುರ್ಘಟನೆಯನ್ನು ಖಂಡಿಸಿ, ಮೃತರ ಕುಟುಂಬಗಳಿಗೆ ಸಾಂತ್ವನ ತಿಳಿಸಿ, ಶೋಕ ಸಂದೇಶ ಕಳುಹಿಸಿವೆ. ಜಪಾನ್ ರಾಯಬಾರಿ ಒನೋ ಕೀಚಿ, ಸ್ಫೋಟದಿಂದಾದ ಪ್ರಾಣ ಹಾನಿಗೆ ಶೋಕ ವ್ಯಕ್ತಪಡಿಸಿ, ಸಂತಾಪ ಸೂಚಿಸಿದ್ದಾರೆ. ಬ್ರಿಟಿಷ್ ಹೈ ಕಮಿಷನರ್, ಲಿಂಡಿ ಕ್ಯಾಮರಾನ್ ಮೃತಪಟ್ಟವರ ಕುಟುಂಬಸ್ಥರಿಗೆ ಸಂತಾಪ ತಿಳಿಸಿದ್ದಾರೆ. ಶ್ರೀಲಂಕಾ, ಇರಾನ್, ಬಾಂಗ್ಲಾದೇಶ ಸೇರಿದಂತೆ ವಿವಿಧ ರಾಷ್ಟ್ರಗಳ ರಾಯಬಾರ ಕಚೇರಿಗಳು ತಮ್ಮ ಸಂತಾಪ ಸೂಚಕ ಸಂದೇಶ ಕಳುಹಿಸಿ, ತಮ್ಮ ಸಹೃದಯತೆ ವ್ಯಕ್ತ ಪಡಿಸಿವೆ. ಹೊಸ ದಿಲ್ಲಿಯ ಕೆಂಪುಕೋಟೆ ಬಳಿಯ, ಸ್ಫೋಟದ ಹಿನ್ನೆಲೆ, ದಿಲ್ಲಿ ಪೊಲೀಸ್ ಕಂಟ್ರೋಲ್ ರೂಂ, ಸಹಾಯವಾಣಿ ಆರಂಭಿಸಿದೆ. ತುರ್ತು ಮಾಹಿತಿಗಾಗಿ, 011–229–100–10 ಅಥವಾ 011–229–100–11 ಸಂಪರ್ಕಿಸುವಂತೆ, ಕೋರಲಾಗಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು

<><><>

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಇಂದು, ಕೋಲಾರ ಜಿಲ್ಲೆ, ಮಾಲೂರು ವಿಧಾನಸಭಾ ಕ್ಷೇತ್ರದ ಮರು ಮತಎಣಿಕೆ ನಡೆಯಲಿದೆ.ಮರು ಮತ ಎಣಿಕೆ ನಡೆಯುವ, ಕೋಲಾರ ತೋಟಗಾರಿಕೆ ವಿಶ್ವವಿದ್ಯಾಲಯದ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ, ಎಂ.ಆರ್. ರವಿ ತಿಳಿಸಿದ್ದಾರೆ. ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡಲು, ಮೆರವಣಿಗೆ, ವಿಜಯೋತ್ಸವ, ಪಟಾಕಿ ಸಿಡಿಸುವುದನ್ನು ನಿಷೇಧಿಸಿ, ಅವರು ಆದೇಶಿಸಿದ್ದಾರೆ. ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರ ನೇತೃತ್ವದ ಬಿಜೆಪಿ ನಿಯೋಗ, ನಿಷ್ಪಕ್ಷಪಾತ ಹಾಗೂ ಪಾರದರ್ಶಕ ಮರು ಮತ ಎಣಿಕೆಗೆ ಆಗ್ರಹಿಸಿ, ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದೆ.

<><><>

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ – ಕೆ.ಎಸ್.ಆರ್.ಟಿ.ಸಿ, ಭಾರತ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ, ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ.

ಕೆ.ಎಸ್.ಆರ್.ಟಿ.ಸಿ, ಮೈಸೂರು ನಗರ ಸಾರಿಗೆಯ, 200 ಬಸ್‌ಗಳಲ್ಲಿ ದೃಷ್ಟಿ ವಿಶೇಷಚೇತನರ ಅನುಕೂಲಕ್ಕಾಗಿ ಅಳವಡಿಸಿದ್ದ, ಧ್ವನಿ ಸ್ಪಂದನ – ಆನ್ ಬೋರ್ಡ್ ಬಸ್ ಐಡೆಂಟಿಫಿಕೇಶನ್ ಹಾಗೂ ನೇವಿಗೇಶನ್ ಸಿಸ್ಟಂ ಅನುಷ್ಠಾನಗೊಳಿಸಿದ್ದಕ್ಕೆ, ಈ ಪ್ರಶಸ್ತಿ ಸಂದಿದೆ. ಕೆ.ಎಸ್.ಆರ್.ಟಿ.ಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ನಿಗಮದ ಪರವಾಗಿ, ಪ್ರಶಸ್ತಿ ಸ್ವೀಕರಿಸಿದ್ದಾರೆ.

<><><>

ಸ್ವಾತಂತ್ರ್ಯ ಸೇನಾನಿ, ಧರ್ತಿ ಆಬಾ, ಭಗವಾನ್ ಬಿರ್ಸಾ ಮುಂಡಾ ಅವರ, 150ನೇ ಜಯಂತ್ಯುತ್ಸವದ ಹಿನ್ನೆಲೆ, 2025ನ್ನು ಜನ್ ಜಾತೀಯ ಗೌರವ ವರ್ಷವೆಂದು, ಕೇಂದ್ರ ಸರ್ಕಾರ ಘೋಷಿಸಿದೆ. ನವೆಂಬರ್ 1 ರಂದು, ಜನ್ ಜಾತೀಯ ಗೌರವ ವರ್ಷದ ಪಾಕ್ಷಿಕಕ್ಕೆ ಚಾಲನೆ ನಿಡಲಾಗಿದ್ದು, ಭಗವಾನ್ ಬಿರ್ಸಾ ಮುಂಡಾ ಅವರ, ಜನ್ಮ ದಿನವಾದ, ನವೆಂಬರ್ 15ರ ವರೆಗೆ, ವಿಶೇಷ ಅಭಿಯಾನ ಜರುಗುತ್ತಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಜನ್ ಜಾತೀಯ ಗೌರವ ವರ್ಷ ಪಾಕ್ಷಿಕ ಅಭಿಯಾನದ ಕುರಿತು, ಮಾಹಿತಿ ನೀಡಿದ್ದಾರೆ, ಜಿಲ್ಲಾ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಅಧಿಕಾರಿ ಎಚ್.ಎಸ್. ಬಿಂದ್ಯಾ.

<><><>

ಎಚ್.ಎಸ್. ಬಿಂದ್ಯಾ ಧ್ವನಿ 68 ಸೆಕೆಂದುಗಳು

<><><>

ಇಂದು ರಾಷ್ಟ್ರೀಯ ಶಿಕ್ಷಣ ದಿನಾಚರಣೆ. ಸ್ವತಂತ್ರ ಭಾರತದ ಪ್ರಥಮ ಶಿಕ್ಷಣ ಖಾತೆ ಸಚಿವ, ಮೌಲಾನಾ ಅಬುಲ್ ಕಲಾಂ ಅಜಾದ್ ಅವರ ಜನ್ಮದಿನವಾದ ಇಂದು, ನವೆಂಬರ್ 11 ರಂದು, ದೇಶದ ಭವಿಷ್ಯವನ್ನು ರೂಪಿಸುವ, ಶಿಕ್ಷಣದ ಮಹತ್ವವನ್ನು ಸಾರುವ ದಿನವಾಗಿ ದೇಶಾದ್ಯಂತ ಆಚರಿಸಲಾಗುತ್ತದೆ. ಕೇಂದ್ರ ಸರ್ಕಾರ, ನೂತನವಾಗಿ ಜಾರಿಗೊಳಿಸಿದ ರಾಷ್ಟ್ರೀಯ ಶಿಕ್ಷಣ ನೀತಿ, ಎನ್.ಇ.ಪಿ, 21ನೇ ಶತಮಾನಕ್ಕೆ ಬೇಕಿರುವ, ಆತ್ಮ ನಿರ್ಭರ ಭಾರತ ಪರಿಕಲ್ಪನೆಯ ಮುನ್ನೋಟಕ್ಕೆ ಅನುಗುಣವಾಗಿ, ರಾಷ್ಟ್ರೀಯ ಪಠ್ಯಕ್ರಮ ರೂಪಿಸಲಾಗಿದೆ. ಶಿಕ್ಷಣ ಮೂಲಭೂತ ಹಕ್ಕಾಗಿದ್ದು, 2010 ರಲ್ಲಿ ಜಾರಿಗೆ ತರಲಾದ, ಶಿಕ್ಷಣ ಹಕ್ಕು ಕಾಯಿದೆ–ಆರ್.ಟಿ.ಇ ಅಡಿ, ಸಮಾಜದ ಎಲ್ಲ ವರ್ಗದ ಮಕ್ಕಳಿಗೆ, ಗುಣಮಟ್ಟದ ಪ್ರಾಥಮಿಕ ಶಿಕ್ಷಣದ ಹಕ್ಕನ್ನು ಖಾತ್ರಿ ಪಡಿಸುತ್ತದೆ.ಇಂದು ಬೆಳಗ್ಗೆ 11 ಗಂಟೆಗೆ, ರಾಷ್ಟ್ರೀಯ ಶಿಕ್ಷಣ ದಿನ ಕಾರ್ಯಕ್ರಮ, ಬೆಂಗಳೂರು ವಸಂತನಗರದ, ದೇವರಾಜ ಅರಸು ಭವನದಲ್ಲಿ, ಜರುಗಲಿದೆ. ಅಲ್ಪಸಂಖ್ಯಾತರ ಅಭಿವೃದ್ಧಿ ಖಾತೆ ಸಚಿವ, ಜಮೀರ್ ಅಹಮದ್ ಖಾನ್ ಉದ್ಘಾಟಿಸಲಿದ್ದಾರೆ.

<><><>

ಇಂದು ವೀರ ವನಿತೆ ಒನಕೆ ಓಬವ್ವನವರ ಜಯಂತಿ. ಇಂದು ಬೆಳಗ್ಗೆ 11 ಗಂಟೆಗೆ, ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಒನಕೆ ಓಬವ್ವ ಜಯಂತಿ ಆಯೋಜಿತವಾಗಿದೆ. ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಹೊಸ ದಿಲ್ಲಿಯ, ಕೆಂಪುಕೋಟೆ ಬಳಿ, ಕಾರ್ ಸ್ಫೋಟ; 8 ಜನರ ಸಾವು, 25ಕ್ಕೂ ಹೆಚ್ಚು ಜನರಿಗೆ ಗಾಯ.
- ರಾಷ್ಟ್ರ ರಾಜಧಾನಿಯಲ್ಲಿ ಕಾರ ಸ್ಫೋಟದ ಹಿನ್ನೆಲೆ, ರಾಜ್ಯಾದ್ಯಂತ ಕಟ್ಟೆಚ್ಚರ; ಬಿಗಿ ಪೊಲೀಸ್ ಬಂದೋಬಸ್ತ್.
- ಇಂದು ರಾಷ್ಟ್ರೀಯ ಶಿಕ್ಷಣ ದಿನ: ಮೌಲಾನಾ ಅಬುಲ್ ಕಲಾಂ ಅಜಾದ್, ಕೊಡುಗೆ ಸ್ಮರಣೆ.
- ವೀರ ವನಿತೆ, ಒನಕೆ ಓಬವ್ವ ಅವರ ಜಯಂತ್ಯುತ್ಸವ, ಇಂದು ನಾಡಿನಾದ್ಯಂತ ಆಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>